Ex.ನಂ.18/2022

ಪಿ.ಡಬ್ಲ್ಯೂ -01

**ಸಾಕ್ಷಿಯನ್ನು ದಿಃ 14.11.2025 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ  ಅಮಲ್ದಾರಿ ಪರ ಶ್ರೀ. ವಿ.ಎನ್. ವಕೀಲರಿಂದ.**

ಈ ಪ್ರಕರಣದ ತೀರ್ಪು ಋಣಿಗಾರರು ನನ್ನ ಅಣ್ಣನ ಹೆಂಡತಿ ಆಗಬೇಕು. ಹುಲಿಯೂರುದುರ್ಗ ಮತ್ತು ಜಮೀನಿನ ಹತ್ತಿರ ಟಂ ಟಂ ಹಾಕಿದಾಗ ನನಗೆ ಜಮೀನು ಜಪ್ತಿ ಆಗಿರುವ ವಿಚಾರ ನನಗೆ ಗೊತ್ತಾಗಿರುತ್ತದೆ. ನನ್ನ ಹೆಸರಿಗೆ ದಾನ ಪತ್ರ ಆಗುವ ಮೊದಲು ನಾನು ಎಲ್ಲ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ. ನಾನು ನನ್ನ ಅಣ್ಣನ ಹೆಸರಿಗೆ ಪಹಣಿ ಪತ್ರಿಕೆಯಲ್ಲಿ ಹೆಸರು ಬರುವ ಬಗ್ಗೆ ದಾಖಲೆ ನೋಡಿರುತ್ತೇನೆ.  ಪಹಣಿ ಪತ್ರಿಕೆಯಲ್ಲಿ ನನ್ನ ಅಣ್ಣನ ಹೆಸರಿನ ಜೊತೆ ತೀರ್ಪುಋಣಿಗಾರರ ಹೆಸರು ಸಹ ಇದೆ ಎಂದರೆ ಸರಿ. ಸದರಿ ಪಹಣಿ ಪತ್ರಿಕೆಯ ಕಾಲಂ ನಂ 9 ಮತ್ತು 12 ರಲ್ಲಿ ನನ್ನ ಅಣ್ಣ ಮತ್ತು ಅವರ ಹೆಂಡತಿಯ ಹೆಸರು ಜಂಟಿ ಆಗಿ ಬರುತ್ತಿದೆ ಎಂದರೆ ಸರಿ.

ನಾನು 8ನೇ ತರಗತಿಯವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ನನ್ನ ಅಣ್ಣ 3 ಅಥವಾ 4ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ. ನನ್ನ ಅಣ್ಣ ಜೀವನೋಪಾಯಕ್ಕೆ ಈಗ ಏನು ಮಾಡಿಕೊಂಡಿರುವುದಿಲ್ಲ. ಮೊದಲು ನನ್ನ ಅಣ್ಣ ಹಸಿಗೆ ಹೋಬಳಿಯ ಸರ್ವೆ ನಂ 302 ರಲ್ಲಿ ಹಾಲೋ ಬ್ರೀಕ್ಸ ವ್ಯಾಪಾರ ಮಾಡಿಕೊಂಡು ಇದ್ದರು ಎಂದು ಹೇಳುತ್ತಾರೆ. ನನಗೆ ದಾನ ಪತ್ರ ಆಗುವ ಮೊದಲು ನನ್ನ ಅಣ್ಣ ಮತ್ತು ಅವರ ಹೆಂಡತಿ ಸ್ವಾಧೀನದಲ್ಲಿದ್ದರು ಎಂದರೆ ಸರಿ.

ನನಗೆ ಈ ದಾನ ಪತ್ರ ಆಗುವ ಮೊದಲು ನನ್ನ ಅಣ್ಣ ಮತ್ತು ನನ್ನ ಅತ್ತಿಗೆ ಮೊದಲು ಊರಿನಲ್ಲಿದ್ದರು ಅಂದರೆ 2011 ರಲ್ಲಿ ನಾವು ವಿಭಾಗ ಆಗುವ ಮೊದಲು ಕಪ್ಲಾಂಪುರ ಗ್ರಾಮದಲ್ಲಿ ಎಲ್ಲರೂ ಒಟ್ಟಿಗೆ ಇದ್ದೇವೆಂದು ಹೇಳುತ್ತಾರೆ. ನಂತರ ನನ್ನ ಅಣ್ಣ ಮತ್ತು ಅವರ ಹೆಂಡತಿ ಹು.ದುರ್ಗಕ್ಕೆ ಬಂದು ಮೊದಲು ಮನೆ ಮಾಡಿಕೊಂಡು ಇದ್ದರು ಈಗ ಇರುವುದಿಲ್ಲವೆಂದು ಹೇಳುತ್ತಾರೆ. ಈಗ ನನ್ನ ಅಣ್ಣ ಕಪ್ಲಾಂಪುರ ಗ್ರಾಮದಲ್ಲಿ ಮನೆ ಕಟ್ಟಿಕೊಂಡು ಒಬ್ಬರೆ ವಾಸ ಇದ್ದಾರೆಂದು ಹೇಳುತ್ತಾರೆ.

ಸದರಿ ಮನೆಯಲ್ಲಿ ಒಂದು ರೂಂ ಮತ್ತು ಹಾಲ್ ಇರುತ್ತದೆ. ನನ್ನ ಅಣ್ಣ ಮತ್ತು ಅವರ ಹೆಂಡತಿ ಹು.ದುರ್ಗದಲ್ಲಿ ಶಾ ಮಿಲ್ ನ ಹಿಂಭಾಗ ಮನೆ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ಮುಖ್ಯ ರಸ್ತೆಗೆ ಮನೆ ಮಾಡಿಕೊಂಡಿದ್ದರು ಎಂದು ಹೇಳುತ್ತಾರೆ. ಸದರಿ ಮನೆಯಲ್ಲಿ ನನ್ನ ಅಣ್ಣ ಮತ್ತು ಅವರ ಹೆಂಡತಿ ಅವರು ಎಷ್ಟು ವರ್ಷ ಚನ್ನಾಗಿದ್ದರು ಎಂದರೆ ಸಾಕ್ಷಿ ಅವರಿಗೆ ಮೊದಲಿನಿಂದಲೂ ವೈಮನಸ್ಸು ಇತ್ತು ಎಂದು ಹೇಳುತ್ತಾರೆ. ಒಟ್ಟು ಕುಟುಂಬದಲ್ಲಿದ್ದಾಗಿನಿಂದಲೂ ಅವರ ನಡುವೆ ವೈಮನಸ್ಸು ಇತ್ತು. ಅವರಿಗೆ ಇಬ್ಬರು ಮಕ್ಕಳು ಇದ್ದು ಅವರು ಜೊತೆಯಲ್ಲಿದ್ದರು. ಈಗ ಅವರ ಮಕ್ಕಳು ನನ್ನ ಅಣ್ಣನೊಂದಿಗೆ ವಾಸ ವಾಸ ಇರುತ್ತಾರೆ.

ಈಗ ನನ್ನ ಅತ್ತಿಗೆ ಬೆಂಗಳೂರಿನ ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಿಕೊಂಡು ಇರುತ್ತಾರೆ ಸಾಕ್ಷಿ ಸ್ವ ಇಚ್ಚೆಯಿಂದ 5 – 6 ವರ್ಷಗಳಿಂದ ಇರುತ್ತಾರೆಂದು ಹೇಳುತ್ತಾರೆ. ನಾನು ಮತ್ತು ನನ್ನ ಅಣ್ಣ ಮೊದಲಿನಿಂದಲೂ ಚನ್ನಾಗಿದ್ದೇವೆ. ನನ್ನ ಅಣ್ಣ ಅವರ ಹೆಂಡತಿಗೆ ಬಿಡಲು ಕಾರಣ ವೆಂದರೆ ಅವರಿಬ್ಬರಲ್ಲಿ ವೈಮನಸ್ಸು ಇತ್ತು ಎಂದು ಹೇಳುತ್ತಾರೆ. ನನ್ನ ಅಣ್ಣನ ಹೆಂಡತಿ ಅವರ ಗಂಡನೊಂದಿಗೆ ಸರಿ ಇಲ್ಲದ ಕಾರಣ ಡಿಕ್ರಿದಾರರೊಂದಿಗೆ ಸೇರಿ ದಾವಾ ಸ್ವತ್ತನ್ನು ಖಬಳಿಸುವ ಪ್ರಯತ್ನ ಮಾಡಿರುತ್ತಾರೆ.

ಡಿಕ್ರಿ ಹೋಲ್ಡರ್ ನನಗೆ ಗೊತ್ತು. ಡಿಕ್ರಿ ಹೋಲ್ಡರಗೂ ನನ್ನ ಅಣ್ಣನ ಹೆಂಡತಿಗೂ ಏನು ವ್ಯವಹಾರ ಇತ್ತು ಎಂದು ನನಗೆ ಗೊತ್ತಿಲ್ಲ. ಡಿಕ್ರಿ ಹೋಲ್ಡರ ಅವರಿಗೆ ನನ್ನ ಅಣ್ಣನ ಹೆಂಡತಿಗೂ ಹಣದ ವ್ಯವಹಾರ ಇತ್ತು ನನ್ನ ಅಣ್ಣನ  ಬ್ರೀಕ್ಸ ಅಂಗಡಿ ವ್ಯಾಪಾರ ನಡೆಸಲು 5 ಲಕ್ಷ ಹಣವನ್ನು ಸಾಲವನ್ನು ಪಡೆದಿದ್ದರು ಎಂದರೆ ಸರಿಯಲ್ಲ. ಇದೇ ಹಣಕಾಸಿನ ವ್ಯವಹಾರದ ಸಂಬಂಧಿಸಿದಂತೆ ಬೆಂಗಳೂರಿನ ನ್ಯಾಯಾಲಯದಲ್ಲಿ ಚಕ್ ಬೌನ್ಸ ಪ್ರಕರಣದಲ್ಲಿ ಹಾಜರಾಗುತ್ತಿದ್ದಾರೆ ಎಂದರೆ ಸಾಕ್ಷಿ ನನ್ನ ಅಣ್ಣ ಕೇಸಿಗೆ ಹೋಗುತ್ತಿದ್ದು ಯಾವ ಕೇಸವೆಂದು ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ.

ನನಗೆ ಚೇತನ ಅನ್ನುವ ವ್ಯಕ್ತಿ ಗೊತ್ತಿಲ್ಲ.  ಚೇತನ ಅವರ ಬಳಿ ನನ್ನ ಅಣ್ಣ ಲಕ್ಷಾಂತರ ರೂ ಹಣ ಸಾಲ ಮಾಡಿದ್ದು ಬೆಂಗಳೂರಿನ ಮೇಮೊಹಾಲ್ ಮತ್ತು ಸಿ.ಎಂ.ಎಂ. ನ್ಯಾಯಾಲಯದಲ್ಲಿ ಪ್ರಕರಣಗಳು ನಡೆಯುತ್ತವೆ ಎಂದರೆ ಸರಿಯಲ್ಲ. ಹು.ದುರ್ಗದ ಮರಿಯಪ್ಪ ಅವರ ಮಗ ಮನೋಹರ್ ನನಗೆ ಗೊತ್ತಿಲ್ಲ. ಮನೋಹರ ಎನ್ನುವವರು ನನ್ನ ಅಣ್ಣ ಮತ್ತು ನನ್ನ ಅತ್ತಿಗೆಯ ಮೇಲೆ

ಹಲವಾರು ಚೆಕ್ ಬೌನ್ಸ ಪ್ರಕರಣಗಳನ್ನು ದಾಖಲು ಮಾಡಿದ್ದು ಬೆಂಗಳೂರಿನ ಮೇಮೊಹಾಲ್ ಮತ್ತು ಸಿ.ಎಂ.ಎಂ. ನ್ಯಾಯಾಲಯದಲ್ಲಿ ಪ್ರಕರಣಗಳು ನಡೆಯುತ್ತವೆ ಎಂದರೆ ಸರಿಯಲ್ಲ. ನಾನು ನನ್ನ ಅಣ್ಣನಿಗೆ ಯಾವುದೇ ಪ್ರಕರಣದಲ್ಲಿ ಜಾಮೀನು ಆಗಿರುವುದಿಲ್ಲ.

ನನ್ನ ಅಣ್ಣ ಮತ್ತು ನನ್ನ ಅತ್ತಿಗೆಯ ಮೇಲೆ ಅಸಲು ದಾವೆ ಮತ್ತು ಕ್ರಿಮಿನಲ್ ಪ್ರಕರಣಗಳು ನಡೆಯುವ ವಿಚಾರ ನನಗೆ ಚನ್ನಾಗಿ ಗೊತ್ತು ಎಂದರೆ ಸರಿಯಲ್ಲ. ನನ್ನ ಅಣ್ಣ ಬ್ರೀಕ್ಸ ಪ್ಯಾಕ್ಟರಿ ನಡೆಸಲು ಪರವಾನಿಗೆ ಪಡೆದ ಬಗ್ಗೆ ನನಗೆ ಗೊತ್ತಿಲ್ಲ ನಾನು ಪರವಾನಿಗೆ ಪಡೆದುಕೊಂಡು ವ್ಯಾಪಾರ ಮಾಡುತ್ತಿದ್ದೇನೆ ಎಂದು ಹೇಳುತ್ತಾರೆ. ನನ್ನ ಅಣ್ಣ ಮತ್ತು ಅವರ ಹೆಂಡತಿ ಬ್ರೀಕ್ಸ ಪ್ಯಾಕ್ಟರಿ ನಡೆಸಲು ಪರವಾನಿಗೆ ಪಡೆದ ಬಗ್ಗೆ ನನಗೆ ಗೊತ್ತಿಲ್ಲ. ನ್ಯಾಯಾಲಯಕ್ಕೆ ಜಪ್ತಿ ಆಗಿರುವ ಆಸ್ತಿ ಮೊದಲು ನನ್ನ ಅಣ್ಣ ಮತ್ತು ಅವರ ಹೆಂಡತಿಯ ಹೆಸರಿಗೆ ಜಂಟಿ ಮಾಲಿಕತ್ವದಲ್ಲಿತ್ತು ಎಂದರೆ ಸರಿ.

ನ್ಯಾಯಾಲಯಕ್ಕೆ ಜಪ್ತಿ ಆಗಿರುವ ಆಸ್ತಿ ಅಸಲು ದಾವೆ ನಂ 104/2020 ದಿಃ 15.11.2021 ರಂದು ನ್ಯಾಯಾಲಯಕ್ಕೆ ಜಪ್ತಿ ಆಗಿತ್ತು ಎಂದರೆ ಸಾಕ್ಷಿ ನನಗೆ ಟಂ ಟಂ ಮಾಡಿಸಿದ ಬಳಿಕ ಗೊತ್ತಾಗಿರುತ್ತದೆಂದು ಹೇಳುತ್ತಾರೆ. ಈ ವಿಚಾರ ನನಗೆ ಮತ್ತು ನನ್ನ ಅಣ್ಣನಿಗೆ ಹಾಗೂ ನನ್ನ ಅಣ್ಣನ ಹೆಂಡತಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಟಂ ಟಂ ಹೊಡೆಸಿದ ಬಳಿಕ ನನಗೆ ನ್ಯಾಯಾಲಯದಲ್ಲಿ ಜಪ್ತಿ ಆಗಿರುವ ಸ್ವತ್ತು ಎಂದು ನಂತರ ನಾನು ಅರ್ಜಿ ಸಲ್ಲಿಸಿರುತ್ತೇನೆ.

ನಾನು ನನ್ನ ಅಣ್ಣ ಮತ್ತು ನನ್ನ ಅತ್ತಿಗೆ ಅವರು ಪದ್ಮಾ, ಚೇತನ, ಮನೋಹರ ಮತ್ತು ಸರಸ್ವತಿ ಅವರಿಗೆ ಮೋಸ ಮಾಡುವ ಉದ್ದೇಶದಿಂದ ನಾವೆಲ್ಲರೂ ಸೇರಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಸರಸ್ವತಿ ಎನ್ನುವವರು ಸಲ್ಲಿಸಿದ ಅಮಲ್ಜಾರಿ ಪ್ರಕರಣದಲ್ಲಿಯೂ ಸಹ ಇದೇ ರೀತಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ನ್ಯಾಯಾಲಯಕ್ಕೆ ಜಪ್ತಿ ಆದ ಸ್ವತ್ತನ್ನು ಆದೇಶ ಅನುಸಾರ ಜಪ್ತಿ ಮಾಡಿದಲ್ಲಿ ತೊಂದರೆ ಆಗುತ್ತದೆಂದು ನಾನು ನನ್ನ ಅಣ್ಣ ಮತ್ತು ಅತ್ತಿಗೆ ಸೇರಿ ದಿಃ 23.09.2021 ರಂದು ದಾನ ಪತ್ರವನ್ನು ಡಿಕ್ರಿ ಹೋಲ್ಡರಗೆ ಮೋಸ ಮಾಡುವ ಉದ್ದೇಶದಿಂದ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದಿಃ 15.11.2021 ರಲ್ಲಿಯೇ ಸದರಿ ಸ್ವತ್ತು ನ್ಯಾಯಾಲಯಕ್ಕೆ ಜಪ್ತು ಆಗಿರುತ್ತದೆ ಅದನ್ನು ತಪ್ಪಿಸುವ ಉದ್ದೇಶದಿಂದ ನಿ.ಪಿ 1 ಅನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ನನ್ನ ಅಣ್ಣನಿಂದ ಮಾತ್ರ ದಾನ ಪತ್ರ ಬರೆಸಿಕೊಂಡಿರುತ್ತೇನೆ ಎಂದರೆ ಸಾಕ್ಷಿ ನನ್ನ ಅಣ್ಣನ ಹೆಂಡತಿ ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟಿರುತ್ತಾರೆಂದು ಹೇಳುತ್ತಾರೆ. ದಾನ ಪತ್ರದ 1 ವರ್ಷದ ಮೊದಲು ಹಕ್ಕು ಖುಲಾಸೆ ಪತ್ರ ಮಾಡಿಕೊಟ್ಟಿರುತ್ತಾರೆ. ನನ್ನ ಅತ್ತಿಗೆ ಹಕ್ಕು ಖುಲಾಸೆ ಪತ್ರ ಬರೆದು ಕೊಟ್ಟಿದ್ದು ಸದರಿ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ ಸದರಿ ಪತ್ರ ನನ್ನ ಅಣ್ಣನ ಬಳಿ ಇರುತ್ತದೆ. ಸದರಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ.

ನಾನು ಹೇಳುವ ರೀತಿಯಲ್ಲಿ ನನ್ನ ಅಣ್ಣನಿಗೆ ಅವರ ಹೆಂಡತಿ ಯಾವುದೇ ಹಕ್ಕು ಖುಲಾಸೆ ಪತ್ರ ಮಾಡಿಕೊಟ್ಟಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಕ್ಕು ಖುಲಾಸೆ ಪತ್ರದ ವಿಚಾರವನ್ನು ಮತ್ತು ನ್ಯಾಯಾಲಯಕ್ಕೆ ಜಪ್ತು ಆದ ಸ್ವತ್ತಿನ ಸಂಪೂರ್ಣ ಮಾಲಿಕರು ನನ್ನ ಅಣ್ಣ ಇರುವ ಬಗ್ಗೆ ಬರೆದಿರುವುದಿಲ್ಲವೆಂದರೆ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ನನ್ನ ಅಣ್ಣ ನನ್ನ ಅತ್ತಿಗೆ ವಿರುದ್ದ ಹು.ದುರ್ಗ ಪೊ. ಠಾಣೆಯಲ್ಲಿ ಅವರು ಸಾಕಷ್ಟು ಜನರಿಂದ ಹಣ ಪಡೆದು ಮೋಸ ಮಾಡಿರುವ ಬಗ್ಗೆ ದೂರನ್ನು ನೀಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ.

ನನ್ನ ಅಣ್ಣ ಮತ್ತು ನನ್ನ ಅತ್ತಿಗೆ ಹಣದ ಪ್ರಾಬಲ್ಯದಿಂದ ದೂರು ದಾಖಲಾಗದಂತೆ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ಹು.ದುರ್ಗ ಗ್ರಾಮಕ್ಕೆ ಗೊತ್ತಿದ್ದರೂ ನನಗೆ ಗೊತ್ತಿಲ್ಲವೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆಸಿದ್ದೀರಾ ಎಂದು ಗೊತ್ತಿದೆಯಾ ಎಂದರೆ 2 ವರ್ಷದ ಹಿಂದೆ ದಾಖಲು ಮಾಡಿದ್ದು ಗೊತ್ತಿಲ್ಲವೆಂದು ಹೇಳುತ್ತಾರೆ. ನಾನು ಸುಳ್ಳು ಮಾಹಿತಿ ನೀಡಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಮತ್ತು ನ್ಯಾಯಾಲಯದ ಮುಂದೆ ಸೃಷ್ಟಿ ಮಾಡಿದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ,

ಕುಣಿಗಲ್